ದಿನ ನಗುತ್ತಲೇ ಕೇಳಿದ: "ಏನಮ್ಮಾ, ಅಮೆರಿಕಾ ದೋಸ್ತಾ, ಕೃತಜ್ಞತೆಯ ಮೂಟೆಯನ್ನೇ ಹೊರ್ಸಿದಾನೆ–ಅದೇನ್ ಅಷ್ಟು ದೊಡ್ಡ ಉಪಕಾರ ತಾವು ಮಾಡಿದ್ದು, ಕೇಳಬಹುದು ತಾನೆ?" ಅಷ್ಟೇ ಸಹಜವಾಗಿ, ಇವಳೂ ಉತ್ತರಿಸಿದಳು: "ಅವನಿಗೆ ಇಪ್ಪತ್ತು ಲಕ್ಷ ರೂಪಾಯಿ ಕಳ್ಸಿಕೊಟ್ಟಿದ್ದೆ: ನನ್ನ ಇಷ್ಟೂ ವರ್ಷದ ಸೇವಿಂಗ್ಸ್! ನಾವು ಒಟ್ಟು ಐದು ಜನ ಹಳೇ ಸ್ನೇಹಿತರು ಸೇರಿ, ಅವನ ಹಾರ್ಟ್ ಆಪರೇಷನ್ನಿನ ಖರ್ಚನ್ನ ಹಾಕ್ಕೊಳ್ತಾ ಇದೀವಿ. ನಿನ್ನ ಹಣವನ್ನು ಕೇಳಬಾರದು, ಮತ್ತು ನಿಂಗೆ ಹೇಳಬಾರದು ಅಂತ ಅವನೇ ಹೇಳಿದ್ದ... ನಿಂಗೆ ಇದ್ಯಾವುದೂ ಇಷ್ಟ ಆಗೋಲ್ಲ ಅಂತ ಗೊತ್ತಿದ್ದರೂ, ನಾನು ನಿನಗೆ ಹೇಳ್ತಿದ್ದೆ–ಆಪರೇಷನ್ ಮುಗೀಲಿ ಅಂತ ಕಾಯ್ತಾ ಇದ್ದೆ. ಅರ್ಧ ಗಂಟೆಯ ಹಿಂದಷ್ಟೆ ಮೇಲ್ ಬಂತು. ನಿರೀಕ್ಷೆ ಮಾಡಿದ ಹಾಗೆ ಆಪರೇಷನ್ ಸಕ್ಸಸ್! ಪೂಂಗವನಮ್ ಮುಂದಿನ ತಿಂಗಳು ಇಂಡಿಯಾಕ್ಕೆ ಬರ್ತಿದಾನೆ; ನಮ್ಮ ಮನೆಯಲ್ಲೇ ಇರ್ತಾನೆ–ಕನಿಷ್ಠ ಒಂದು ವರ್ಷ! ಒಪ್ಪಿಗೆ ತಾನೆ? ಈ ಮನೆಗೆ ಒಂದು ಕೂಸು ಬೇಕು ಅಂತಿದ್ದೆಯಲ್ಲ–ಬರುತ್ತೆ." ಋತನ ನೆತ್ತರು ಕದಡಿತು: "ಸರಿ. ನೀನು ಆರೈಕೆ ಮಾಡ್ಕೊಂಡು ಇಲ್ಲೇ ಇರು; ನಾನು ಬೇರೆ ಹೋಗ್ತೀನಿ... ನಂಗೆ ಸಾಕು ಸಾಕಾಗಿಹೋಗಿದೆ." "ಬೇಡ ಕಂದಾ, ನೀನು ಇಲ್ಲೇ ಇರು; ನಾನೇ ಹೋಗ್ತೀನಿ. ನನಗೂ ಸಾಕು ಸಾಕಾಗಿದೆ."

ಇತ್ತ, ಪೂಂಗವನಮ್ ಭಾರತಕ್ಕೆ ಬರುವ ಮಾತಿರಲಿ, ಆಪರೇಷನ್ ಥಿಯೇಟರಿನಿಂದಲೂ ಹೊರಬರಲಿಲ್ಲ; ಆಪರೇಷನ್ ನಂತರದ ಅವನ ಹೃದಯ ಸ್ವಲ್ಪ ಹೊತ್ತು ಬಡಿದುಕೊಂಡಿತಾದರೂ, ಕೊನೆಗೆ ಸುಮ್ಮನಾಗಿಬಿಟ್ಟಿತು.

ಆಮೇಲೆ, ಸ್ವಯಂ ಪ್ರಭೆಯುಳ್ಳವರಾದ ಇವರಿಬ್ಬರೂ ತಮ್ಮ ಗೆಳೆಯನ ಸಾವಿನಿಂದ ಸ್ವಲ್ಪವೇ ಮಂಕಾಗಿ, ನಂತರ ತಮ್ಮಷ್ಟಕ್ಕೆ ತಾವು ಬದುಕತೊಡಗಿದರು. ಆದರೂ, ಆಗಾಗ ಇಲ್ಲಸಲ್ಲದ ನೆವವೊಡ್ಡಿ ನುಗ್ಗುವ ನೆನಪುಗಳನ್ನು ಇವರು ಎಡಗೈಯಿಂದ ತಳ್ಳುವುದುಂಟು–ನೆನಪುಗಳೆಂದರೆ, ತಟ್ಟೆಯ ಮೇಲೆ ಕೂರಲು ಹವಣಿಸುವ ನೊಣವೋ ಅನ್ನುವ ಹಾಗೆ!




## ಅಲಕ ತೀರ್ಥಹಳ್ಳಿ

'ಅಲಕ ತೀರ್ಥಹಳ್ಳಿ' ಎಂಬ ಹೆಸರಿನಲ್ಲಿ ಕತೆಗಳನ್ನು ಬರೆಯುವ ಎಚ್.ವಿ. ಲಕ್ಷ್ಮೀನಾರಾಯಣ ಅವರು ಹುಟ್ಟಿದ್ದು ಸಾಗರ ಸಮೀಪದ ಹೂಗೊಪ್ಪಲು ಎಂಬ ಪುಟ್ಟ ಹಳ್ಳಿಯಲ್ಲಿ. ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತರು. 'ಈ ಕಥೆಗಳ ಸಹವಾಸವೇ ಸಾಕು' ಮತ್ತು 'ನವಿಲೆಸರ' ಅವರ ಕಥಾಸಂಗ್ರಹಗಳು. ಅನೇಕ ನಾಟಕಗಳನ್ನು, ಕವಿತೆಗಳನ್ನು ಬರೆದಿದ್ದಾರೆ. ಅವರ ಚೊಚ್ಚಲ ಕಾದಂಬರಿ, 'ಮುಂದೆ ಬರುವುದು ಮಹಾನವಮಿ'. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.